

## ಚಿಕ್ಕಣ್ಣನ ತರಹ!

ಎಸ್ಸೆಸ್ಸೆಲ್ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ನನ್ನ ತಂಗಿ ಮಗ ಅಕ್ಷಯ ಕುಮಾರನನ್ನು ಯಾವುದಾದರೂ ಪ್ರಸಿದ್ಧ ಕಾಲೇಜಿಗೆ ಸೇರಿಸಿ ಹಾಸ್ಟೆಲಿನಲ್ಲಿ ಬಿಡೋಣ ಎಂದು ಮಾತನಾಡಿಕೊಳ್ಳುತ್ತಿರುವಾಗ, 'ಹೋಗಮ್ಮಾ, ಹಾಸ್ಟೆಲಿಗೆ ಯಾರು ಸೇರುತ್ತಾರೆ. ಹಾಸ್ಟೆಲಿಗೆ ಸೇರುವಾಗ ನಟ ದರ್ಶನ್ ತರಹ ಇದ್ದ ನನ್ನ ಗೆಳೆಯರು ಹಾಸ್ಟೆಲಿನಿಂದ ಬರುವಾಗ ಹಾಸ್ಯನಟ ಚಿಕ್ಕಣ್ಣನ ತರಹ ಆಗಿ ಬಂದಿದ್ದಾರೆ ಗೊತ್ತಾ...' ಎನ್ನಬೇಕೇ?

**ಎಸ್ಸೆನ್ಕೆ, ಕಡೂರು**

## ಕೋಟ್ ಇಲ್ಲದ ಕಡ್ಲೇಬೀಜ

ನಮ್ಮ ತಂಗಿಯ ಮಗ ಚಿನ್ಮಯ ದಸರಾ ರಜಕ್ಕೆ ಬಂದಿದ್ದ. ಅವನಿಗೆ ಹೊತ್ತು ಹೋಗಲು ಜತೆಯ ಹುಡುಗರು ಯಾರೂ ಇಲ್ಲದ್ದರಿಂದ ನಮ್ಮಲ್ಲಿ ಯಾರಾದರೊಬ್ಬರು ಸದಾಕಾಲ ಅವನ ಜತೆಗಿರಬೇಕಿತ್ತು. ಸಂಜೆಯ ಹೊತ್ತು ತಿನ್ನಲು ಅವನಿಗೆ ಪ್ರತಿದಿನ ಬೇರೆ ಬೇರೆ ಬಗೆಯ ಕುರುಕಲು ತಿಂಡಿ ಕೊಡಬೇಕು. ಮನೆಯಲ್ಲಿ ಮಾಡಿದ ಮಾಮೂಲಿ ತಿಂಡಿಗಳಲ್ಲದೆ ಬೇಕರಿಯಲ್ಲಿ ಸಿಕ್ಕುವ ಇತರೆ ತಿಂಡಿಗಳನ್ನೂ ಅವನಿಗೆ ಕೊಡುತ್ತಿದ್ದೆವು. ಒಂದು ದಿನ 'ಸತ್ಯಮಾವ, ನೀವು ಪೇಟೆ ಕಡೆ ಹೋದಾಗ ನಂಗೆ ತಿನ್ನೋಕೆ ಕಾರದ ಕಡ್ಲೇಬೀಜ ತನ್ನಿ ಅಂದ, ಮತ್ತೆ ತಕ್ಷಣವೇ 'ಕೋಟ್ ಇಲ್ದೇ ಇರೋ ಅಂಥದ್ದೇ ತನ್ನಿ' ಅಂದ. ನನಗೆ ತಕ್ಷಣಕ್ಕೆ ಏನೂ ಅರ್ಥವೇ ಆಗಲಿಲ್ಲ. ಇದೇನು ಹೇಳುತ್ತಿದ್ದಾನೆ ಇವನು ಎಂದು ತಲೆ ಕೆಡಿಸಿಕೊಳ್ಳುವಂತಾಯಿತು. 'ಅದೇನು ಸರಿಯಾಗಿ ಹೇಳೋ' ಎಂದು ಕೇಳಿ ಅವನು ವಿವರಿಸಿದ ಮೇಲೆ ಅರ್ಥವಾಯ್ತು. ಅವನು ಕೇಳಿದ್ದು (ಕಡಲೇಬೀಜದ ಮೇಲಿನ ತೆಳು ಸಿಪ್ಪೆ ತೆಗೆದು ಬೇಳೆ ಮಾಡಿ ಖಾರ ಹಚ್ಚಿರುವ) ಕಾಂಗ್ರೆಸ್ ಕಡಲೇಬೀಜವನ್ನು. ಕಡಲೇಬೀಜದ ಮೇಲಿನ ತೆಳು ಸಿಪ್ಪೆಗೆ ಏನು ಹೇಳಬೇಕೋ ಗೊತ್ತಾಗದೆ ಅವನು 'ಕೋಟಿಂಗ್ ಇಲ್ಲದ್ದು' (ಕವಚ ಇಲ್ಲದ್ದು) ಎಂದಿದ್ದ!

**ಕೆ.ಪಿ. ಸತ್ಯನಾರಾಯಣ, ಹಾಸನ**

